# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೫೦

೧೯೪೦ರಲ್ಲಿ ಕುರ್ಸಿಯಾಂಗ್‌ನಲ್ಲಿ ಮಹಾರಾಜರಿಂದ ದೀಕ್ಷೆ ಪಡೆದಿದ್ದ ಪಾರ್ಸಿ ಭಕ್ತರೋರ್ವರು ಇಲ್ಲಿಯವರೆಗೂ ನಾನಾ ಸ್ಥಳಗಳಲ್ಲಿ ಅವರ ಸಾನ್ನಿಧ್ಯ, ಉಪದೇಶ ಮತ್ತು ಆಶೀರ್ವಾದಗಳನ್ನು ಬಹಳ ಪಡೆದಿದ್ದರು; ಈಗ ಅವರು ತುಂಬ ಅವಸರದ ಕೆಲಸದ ಮೇಲೆ ಇಂಗ್ಲೆಂಡಿಗೆ ಹೋಗಬೇಕಾಗಿ ಬಂತು. ಜೂನ್ ಕೊನೆಯ ವಾರದಲ್ಲಿ ಮಹಾರಾಜರಿಂದ ವಿದಾಯ ಪಡೆಯಲು ಬೇಲೂರು ಮಠಕ್ಕೆ ಬಂದವರು, ರೋಗಶಯ್ಯೆಯಲ್ಲಿದ್ದ ಮಹಾರಾಜರ ಕೃಶ ಶರೀರವನ್ನು ಕಂಡು ಕಣ್ಣೀರಿಟ್ಟರು. ವಿರಜಾನಂದರು ಬಹಳ ವಾತ್ಸಲದಿಂದ ಅವರನ್ನು ಆಶೀರ್ವದಿಸಿದರು. ಭಕ್ತರಾದರೋ ಕಕ್ಕುಲತೆಯಿಂದ ಕೇಳಿಕೊಳ್ಳುತ್ತಿದ್ದಾರೆ, ''ಮಹಾರಾಜ್‌ಜೀ, ದಯವಿಟ್ಟು ಹೇಳಿ, ನಾನು ಹಿಂತಿರುಗಿ ಬಂದು ಪುನಃ ನಿಮ್ಮ ದರ್ಶನ ಪಡೆಯುವೆನಷ್ಟೆ?'' ಮಹಾರಾಜರು ಮೌನವಾಗಿದ್ದಾರೆ. ''ಹೇಳಿ ನಿಮ್ಮೊಡನೆ ಮತ್ತೆ ಭೇಟಿಯಾಗುತ್ತದೆ ತಾನೆ?' ಈ ಬಾರಿ ಮಹಾರಾಜರು ಬಾಯಿಬಿಟ್ಟರು, ''ಹ್ಞಾ, ಆಗುತ್ತೆ.''

ಅವರೆಂದ ಹಾಗೆಯೇ ಮತ್ತೆ ಭೇಟಿಯಾಗಿತ್ತು. ೧೯೫೧ರ ಜನವರಿಯಲ್ಲಿ ಅವರು ಇಂಗ್ಲೆಂಡಿನಿಂದ ಮುಂಬೈಗೆ ಬಂದೊಡನೆಯೇ ವಿಮಾನವೇರಿ ಕೊಲ್ಕತ್ತೆಗೆ ಬಂದು ಮಹಾರಾಜರ ದರ್ಶನ, ಆಶೀರ್ವಾದಗಳನ್ನು ಪಡೆದಿದ್ದರು.

ರೋಗಲಕ್ಷಣಗಳ ಏರಿಳಿತಗಳ ನಡುವೆ ಮಹಾರಾಜರು ಹಾಸಿಗೆ ಹಿಡಿದು ಕಾಲ ಕಳೆಯುತ್ತಿದ್ದಾರೆ. ಇತ್ತ ವ್ಯಾಕುಲಗೊಂಡ ಭಕ್ತರ ಗುಂಪು ಜೀವನದ ಅತಿಶ್ರೇಷ್ಠ ಸಂಪದವಾದ ಅಧ್ಯಾತ್ಮದ ಬಗ್ಗೆ ಪರಿಜ್ಞಾನ ಮೂಡಿಸಿದಂತಹವರ ಋಣವನ್ನೇನಾದರೂ ನಮ್ಮಿಂದ ತೀರಿಸಲಾದೀತೆ? ಎಂಬುದು ಅವರ ಭಾವನೆ. ಆ ಪರಮ ಪ್ರಿಯರಾದವರು ಉತ್ತಮ ಆರೋಗ್ಯವನ್ನು ಪಡೆಯಬೇಕೆಂಬುದೇ ಭಕ್ತರ ಹೃದಯದಾಳದ ಅಭಿಲಾಷೆ. ಪುಣ್ಯಕರವಾದ ಗಂಗೆಯ ತೀರದಲ್ಲಿ ಹಾಗೂ ದೇವಾಲಯದಲ್ಲಿ ಶ್ರೀ ಗುರುವಿನ ಪ್ರೀತಿಗೆ ಪಾತ್ರರಾದ ಅವರ ದೀಕ್ಷೆ ಪಡೆದ ಭಕ್ತರು ಏಕಾಂತದಲ್ಲಿ ಕುಳಿತು ದಿನದಿನವೂ ಸಂಧ್ಯೆಯ ಮಂದಪ್ರಕಾಶದಲ್ಲಿ ಮೌನ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು: ''ಪ್ರಭುವೇ, ನಮ್ಮ ಜೀವನ ನೌಕೆಯ ಚುಕ್ಕಾಣಿಗಳನ್ನು ಸ್ವಸ್ಥಗೊಳಿಸು. ಮತ್ತೆ ನಾವು ಅವರ ಶ್ರೀಚರಣಗಳಿಗೆ ಸಾಷ್ಟಾಂಗವೆರಗಿ ಶಕ್ತಿ ಪಡೆಯುವಂತಾಗಲಿ. ಮತ್ತೆ ನಾವು ಅವರ ಸ್ನೇಹ ದೃಷ್ಟಿಯ ಪ್ರಸನ್ನ ಆಶೀ



ರ್ವಾದಗಳ ಮೂಲಕ ಆಂತರ್ಯದ ಅವಸಾನದ ಗ್ಲಾನಿಯನ್ನು ಕ್ಷಣದಲ್ಲಿ ಕಿತ್ತೆಸೆದು ಏಳುವಂತಾಗಲಿ'' ಎಂದು.

ಜುಲೈ ೨೪ರಂದು ಪರಿಸ್ಥಿತಿಯು ಬಹಳ ವಿಕೋಪಕ್ಕೆ ತಿರುಗಿತು. ಹೃದಯ ಮತ್ತು ಮೂತ್ರಪಿಂಡಗಳೆರಡಕ್ಕೂ ವ್ಯಾಧಿಯು ವ್ಯಾಪಿಸಿತ್ತು. ಅಲ್ಲದೆ ಇಡೀ ಶರೀರಕ್ಕೂ ಎಕ್ಸಿಮಾ (ಒಂದು ರೀತಿಯ ಚರ್ಮವ್ಯಾಧಿ) ಹರಡಿತ್ತು. ನಾಲ್ಕು ದಿನಗಳಲ್ಲಿ ಹೇಗೋ ಈ ಸಂಕಟವು ಪರಿಹಾರವಾಯಿತು. ಆದರೆ ಆಗಸ್ಟ್ ಮಧ್ಯ ಭಾಗದಲ್ಲಿ ಮೂತ್ರಾಲ್ಪತೆಯ ಲಕ್ಷಣಗಳು ತಲೆದೋರಿ, ಹೊಸ ತೊಂದರೆಯ ಸೂಚನೆಯಿತ್ತಿತು. ಬೇರೆ ದಾರಿ ಕಾಣದೆ ಮಹಾರಾಜರ ಸಮ್ಮತಿಯನ್ನು ಪಡೆದು ಕೊಲ್ಕತ್ತೆಯ ಪ್ರಖ್ಯಾತ ಸರ್ಜನ್ ಡಾ. ಲಲಿತ್ ಮೋಹನ್ ವಂದೋಪಾಧ್ಯಾಯರಿಂದ ಹೊಕ್ಕಳ ಕೆಳಗೆ ಶಸ್ತ್ರಚಿಕಿತ್ಸೆ ನಡೆಸಿ, ಒಂದು ರಬ್ಬರ್ ನಳಿಕೆಯನ್ನಿಡಲಾಯಿತು (supra-pubic operation). ಇದರಿಂದಾಗಿ ಮಹಾರಾಜರು ಸ್ವಲ್ಪ ಆರಾಮಗೊಂಡರು. ಜನ್ಮಾಷ್ಟಮಿಯ ದಿನದಂದು (ಸೆಪ್ಟೆಂ

ಬರ್ ೮) ಸಂಜೆ ಮಹಾರಾಜರು ತಮ್ಮ ಶಯ್ಯೆಯಲ್ಲಿಯೇ ಕುಳಿತರು. ಪಶ್ಚಿಮಕ್ಕಿರುವ ಕಿಟಕಿಗಳನ್ನು ತೆರೆಯಲಾಯಿತು. ಭಕ್ತರೆಲ್ಲರೂ ಅಂಗಳದಲ್ಲಿ ನಿಂತು ಇವರ ದರ್ಶನವನ್ನು ಪಡೆದರು. ಇಷ್ಟರಲ್ಲಿ ಡಾ. ಇಂದೂಬಾಬುಗಳು ತುಂಬ ಅಸ್ವಸ್ಥರಾದ್ದರಿಂದ ಡಾ. ಹರಿಹರ ಗಂಗೋಪಾಧ್ಯಾಯರು ವಿರಜಾನಂದರ ಚಿಕಿತ್ಸೆಯ ಜವಾಬ್ದಾರಿ ಹೊತ್ತರು.

ದುರ್ಗಾಪೂಜೆಯು ಬಂದಿದೆ. ಮಹಾರಾಜರ ಶರೀರ ಸ್ವಲ್ಪ ಚೇತರಿಸಿಕೊಂಡಿದೆ. ಮಹಾಷ್ಟಮಿಯಂದು ಅವರನ್ನು ಮಂದಿರದ ಪೂಜಾಮಂಟಪಕ್ಕೆ ಕರೆದೊಯ್ಯಲಾಯಿತು. ಗಂಧ ಹಚ್ಚಿದ ಪತ್ರ-ಪುಷ್ಪವನ್ನು ಅವರ ಕೈಗಿತ್ತಾಗ, ಅದನ್ನು ಎರಡೂ ಕೈಗಳಲ್ಲಿ ಹಿಡಿದು ದೇವಿಗೆ ಮನಸಾ ನಿವೇದಿಸಿದರು. ಪೂಜೆ ಮಾಡುವವರು ಅವನ್ನು ತೆಗೆದುಕೊಂಡು ದೇವಿಯ ಚರಣಕ್ಕೆ ಅರ್ಪಿಸಿದರು. ವಿಜಯದಶಮಿಗೆಂದು ಎರಡು ಸಾಲಿನ ಆಶೀರ್ವಾಣಿಯನ್ನು ಕೆಂಪು ಶಾಯಿಯಲ್ಲಿ ಬರೆದು ಸಹಿ ಮಾಡಿದರು. ಅದನ್ನು 'ಬ್ಲಾಕ್' ಮಾಡಿಸಿ ಮುದ್ರಿಸಲಾಗಿತ್ತು. ಸಾಧುಗಳು ಮತ್ತು ಭಕ್ತರಿಂದ ಬಂದಿದ್ದ 'ವಿಜಯಾ'ದ (ವಿಜಯದಶಮಿಯ ಶುಭಹಾರೈಕೆಯ) ಪತ್ರಗಳಿಗೆ ಉತ್ತರವಾಗಿ ಇದನ್ನು ಕಳುಹಿಸಲಾಗಿತ್ತು. ಇದೇ ಅವರ ಕೊನೆಯ ಆಶೀರ್ವಾದದ ಪತ್ರ.

ಅಕ್ಟೋಬರ್ ಕೊನೆಗೆ ಮತ್ತೆ ಸ್ವಾಸ್ಥ್ಯವು ಆತಂಕಜನಕವಾದ ರೀತಿಯಲ್ಲಿ ಕುಂದಿತು. ಈ ಬಾರಿ ಹೃದಯ ಮತ್ತು ಜೀರ್ಣಾಂಗದ ತೊಂದರೆ. ಕೆಲವು ದಿನಗಳ ನಂತರ ಆರೋಗ್ಯ ಸುಧಾರಿಸಿತು. ಇಷ್ಟರಲ್ಲಿ ಕೊಲ್ಕತ್ತೆಯ ನಂ. ೭, ಶ್ರೀ ಮೋಹನ್ ಲೇನ್‌ನಲ್ಲಿ, 'ಶ್ರೀರಾಮಕೃಷ್ಣ ಮಿಷನ್ ಮಾತೃಭವನ್' ಎಂಬ ಹೊಸದೊಂದು ಸಂಸ್ಥೆ ಸ್ಥಾಪಿತವಾಯಿತು. ಇದನ್ನು ಪ್ರಾರಂಭಿಸಬೇಕು ಎಂದು ವಿರಜಾನಂದರದು ತುಂಬು ಆಗ್ರಹ; ಪ್ರಾರಂಭವಾದುದನ್ನು ಕೇಳಿ ತುಂಬ ಹರ್ಷಿತರಾದರು. ಅಕ್ಟೋಬರ್ ೨೨ರಂದು ಚಕ್ರವರ್ತಿ ರಾಜಗೋಪಾಲಾಚಾರಿಗಳಿಂದ ಮೈಸೂರಿನ ಶ್ರೀರಾಮಕೃಷ್ಣ ಮಿಷನ್ನಿನ ಸ್ಟೂಡೆಂಟ್ಸ್ ಹೋಮಿನ ಹೊಸ ಕಟ್ಟಡದ ಉದ್ಘಾಟನೆಯೂ, ಮೂರು ದಿನಗಳ ನಂತರ (೨೫ನೇ ಅಕ್ಟೋಬರ್) ಮಾಧವಾನಂದರಿಂದ ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಮಂದಿರದ ಪ್ರತಿಷ್ಠಾಪನೆಯೂ ನೆರವೇರಿತು. ಈ ಎರಡು ಸಮಾರಂಭಗಳಿಗೂ ನಾನಾ ಕೇಂದ್ರದಿಂದ ಅನೇಕ ಸಾಧುಗಳು ಆಗಮಿಸಿದ್ದರು. ಇದನ್ನೆಲ್ಲ ಕೇಳಿ ರೋಗಶಯ್ಯೆಯಲ್ಲಿದ್ದ ಮಹಾರಾಜರಿಗೆ ತುಂಬ ಆನಂದವಾಗಿತ್ತು.

ನವೆಂಬರ್ ತಿಂಗಳ ಕೊನೆಗೆ ವಿರಜಾನಂದರ ಸ್ವಾಸ್ಥ್ಯದಲ್ಲಿ ಉಲ್ಲೇಖಾರ್ಹವಾದ ಚೇತರಿಕೆ ಕಂಡಿತು. ಮಂಚದ ಮೇಲೆ ದಿಂಬಿಗೆ ಒರಗಿಕೊಂಡು ಸ್ವಲ್ಪಹೊತ್ತು ಕುಳಿತುಕೊಳ್ಳಲಾರಂಭಿಸಿದರು. ಅವರ ಕೊಠಡಿಯ ದಕ್ಷಿಣ ದಿಕ್ಕಿಗೆ ಮಂಚವನ್ನು ಸರಿಸಿದ್ದರಿಂದ ಭಕ್ತರೆಲ್ಲರೂ ಕೆಳಗಿನ ಅಂಗಳದಲ್ಲಿ ನಿಂತು ಸ್ವಲ್ಪ ಹೊತ್ತಿನ ಮಟ್ಟಿಗೆ ಮಹಾರಾಜರ ದರ್ಶನಪಡೆಯಲು ಸಾಧ್ಯವಾಯಿತು. ಡಿಸೆಂಬರಿನ ಮೊದಲ ಮೂರು ವಾರಗಳಲ್ಲಿ ಅವರ ಆರೋಗ್ಯ ಮತ್ತಷ್ಟು ಸುಧಾರಿಸಿತು. ೨೩ರಿಂದ ೨೬ರವರೆಗೆ ನಾಲ್ಕು ದಿನಗಳೂ ಸಹ ಮಹಾರಾಜರನ್ನು ಪೆರಾಂಬುಲೇಟರಿನಲ್ಲಿ ಕುಳ್ಳಿರಿಸಿ ಮಠದ ಕಟ್ಟಡದ ಪೂರ್ವ ಪಾರ್ಶ್ವದ ವರಾಂಡಾಕ್ಕೆ ಕರೆದುಕೊಂಡು ಹೋಗಲಾಗಿತ್ತು. ಮುಕ್ತವಾತಾವರಣದಲ್ಲಿ ಸ್ವಲ್ಪ ಹೊತ್ತು ಕಳೆದರು. ೨೫ರಂದು ಕೆಳಗೆ ನಿಂತಿದ್ದ ಭಕ್ತರನ್ನುದ್ದೇಶಿಸಿ Happy Christmas to you all (ಕ್ರಿಸ್ತನ ಆನಂದಮಯ ಜನ್ಮದಿನವಾದ ಇಂದು ನಿಮಗೆಲ್ಲರಿಗೂ ಅಭಿನಂದನೆಗಳು) ಎಂದು ಎಲ್ಲರನ್ನೂ ಅಭಿನಂದಿಸಿದರು.

ಡಿಸೆಂಬರ್ ಕೊನೆಯ ವಾರದಲ್ಲಿ ಮತ್ತೆ ಸ್ವಾಸ್ಥ್ಯದಲ್ಲಿ ಅವನತಿ ಕಂಡುಬಂದಿತು. ಅವರು ಮಂಚದಲ್ಲಿ ಕುಳಿತುಕೊಳ್ಳುವುದನ್ನೂ ಸಹ ವೈದ್ಯರು ನಿಷೇಧಿಸಿದರು. ಡಿಸೆಂಬರ್ ೩೧ರಂದು ಶ್ರೀಮಾತೆಯವರ ಜನ್ಮದಿನ, ಅಂದು ಸ್ವಲ್ಪ ಚೇತರಿಸಿಕೊಂಡದ್ದರಿಂದ ವೈದ್ಯರ ಸಮ್ಮುಖದಲ್ಲಿ ಅವರನ್ನು ಮಂಚದ ಮೇಲೆ ಕುಳ್ಳಿರಿಸಲಾಯಿತು. ಕೆಳಗಿನಿಂದ ಅವರ ದರ್ಶನ ಪಡೆದ ನೂರಾರು ಭಕ್ತರು ಆನಂದ ಪುಲಕಿತರಾದರು.

ಜನವರಿ ೧ರಂದು ಸಹ (೧೯೫೧) ಇದೇ ರೀತಿ ಕುಳಿತು ದರ್ಶನ ನೀಡಿದ್ದರು. ಕೆಳಗೆ ನಿಂತಿದ್ದ ಭಕ್ತವೃಂದವನ್ನು ನೋಡಿ ಕುಳಿತಲ್ಲಿಂದಲೇ ಹಠಾತ್ತಾಗಿ ಹೇಳಿದರು, ''ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶೀರ್ವಾದಗಳು''. ಪಕ್ಕದಲ್ಲೇ ನಿಂತಿದ್ದ ಅಭಯಾನಂದರು, ''ನೀವು ಮಾತಾಡುವುದೇ ಆದರೆ ಮೈಕ್ ತರುವೆ. ಮೈಕ್‌ನಲ್ಲಿ ಹೇಳಿ, ಎಲ್ಲರಿಗೂ ಕೇಳಿಸುತ್ತದೆ'' ಎಂದರು. ಮಹಾರಾಜರಿಗೆ ಈ ಪ್ರಸ್ತಾಪ ಹಿಡಿಸಿತು. ಮೈಕ್ ಸಜ್ಜಾಗಿಯೇ ಇತ್ತು. ಅದರಲ್ಲಿ ಸ್ಪಷ್ಟವಾದ ಕಂಠದಲ್ಲಿ ಮೊದಲು ಇಂಗ್ಲಿಷಿನಲ್ಲಿ Happy New Year to you all ಎಂದು ಉಚ್ಚರಿಸಿದರು. ನಂತರ ಬಂಗಾಳಿಯಲ್ಲಿ ''ನಿಮಗೆಲ್ಲರಿಗೂ ನನ್ನ ಹೊಸವರ್ಷದ ಶುಭಾಶಯಗಳು, ಠಾಕೂರರು ನಿಮಗೆಲ್ಲರಿಗೂ ಶುಭವನ್ನುಂಟು ಮಾಡಲಿ'' ಎಂದರು.

ಜನವರಿ ೩೦ರಂದು ಸ್ವಾಮೀಜಿಯವರ ಜನ್ಮತಿಥಿ. ಡಾ. ಹರಿಹರಬಾಬುಗಳ ಉಪಸ್ಥಿತಿಯಲ್ಲಿ ಮಹಾರಾಜರು ಬೆಳಗ್ಗೆ ೧೦.೩೦ರಿಂದ ೧೧ರವರೆಗೆ ಮಂಚದಲ್ಲಿ ಕುಳಿತು ಹಿಂದೆ ಹೇಳಿದಂತೆ ಭಕ್ತರಿಗೆ ದರ್ಶನವಿತ್ತರು. ಈ ಶುಭದಿನದಂದು ಮಹಾರಾಜರ ಇಬ್ಬರು ಯುವಶಿಷ್ಯರು ಗೃಹತ್ಯಾಗ ಮಾಡಿ ಮಠವನ್ನು ಸೇರಿದರು. ಅವರಿಬ್ಬರನ್ನೂ ಮಹಾರಾಜರು ಬಹಳ ಆಶೀರ್ವದಿಸಿದರು. ಈರ್ವರೂ ತದನಂತರ ಶ್ರೀಗುರುವಿನ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು.

ಯುವಕರು ಯಾರಾದರೂ ವೈರಾಗ್ಯಪಥವನ್ನು ಅವಲಂಬಿಸಲು ಇಚ್ಛಿಸಿದರೆ ವಿರಜಾನಂದರು ಅಂತಹವರಿಗೆ ಯಾವಾಗಲೂ

ಪ್ರೋತ್ಸಾಹವನ್ನು ನೀಡುತ್ತಿದ್ದರು. ಒಮ್ಮೆ ಎಂ.ಎ. ಪಾಸು ಮಾಡಿದ ಯುವಕನೊಬ್ಬನಿಗೆ ಹುಡುಗಿಯೊಬ್ಬಳ ತಾಯ್ತಂದೆಯರು ಮಗಳನ್ನು ವಿವಾಹವಾಗೆಂದು ದುಂಬಾಲು ಬಿದ್ದರು. ಅಲ್ಲದೆ ಹುಡುಗನ ಬಾಂಧವರನ್ನು ಇದಕ್ಕಾಗಿ ಪ್ರೇರೇಪಿಸಲಾರಂಭಿಸಿದರು. ಯುವಕನಿಗಾದರೋ ಮಠ ಸೇರಬೇಕೆಂಬ ಪ್ರಬಲವಾದ ಇಚ್ಛೆ; ಹುಡುಗಿಯ ಕಡೆಯವರು ಪರಿಸ್ಥಿತಿಯನ್ನು ಎಲ್ಲಿಯವರೆಗೆ ತಂದರೆಂದರೆ ವಿವಾಹವಾಗದೆ ಗತ್ಯಂತರವೇ ಇಲ್ಲವೇನೋ ಎಂಬಲ್ಲಿಯವರೆಗೆ. ಆ ಹುಡುಗಿಯೂ ಸಹ ವಿರಜಾನಂದರ ಶಿಷ್ಯೆ. ಅವಳ ತಂದೆ ತಾಯಿಯರು ಈ ವಿವಾಹಕ್ಕೆ ಸಮ್ಮತಿ ನೀಡುವಂತೆ ಮಹಾರಾಜರಲ್ಲೂ ವಿನಂತಿಸಿಕೊಳ್ಳಲಾರಂಭಿಸಿದರು. ಯುವಕನು ಒಂದು ದಿನ ಮಹಾರಾಜರಲ್ಲಿ ತನ್ನ ಸಂಕಟವನ್ನು ತೋಡಿಕೊಂಡ. ಮಹಾರಾಜರು ಅವನಿಗೆ ಧೈರ್ಯವನ್ನಿತ್ತು, ''ಏನೇ ಆದರೂ ನೀನು ವಿವಾಹವಾಗಬೇಡ. ಸಂಸಾರದಲ್ಲಿ ಎಷ್ಟು ಅಶಾಂತಿಯಿದೆ ಎಂಬುದನ್ನು ನೋಡುತ್ತಿರುವೆಯಷ್ಟೆ. ತ್ಯಾಗದಿಂದ ಮಾತ್ರವೇ ಶಾಂತಿ. ಏನೂ ಭಯಪಡಬೇಡ, ನಿನ್ನ ಗುರು ನಿನ್ನ ಹಿಂದಿದ್ದಾರೆಂಬುದನ್ನು ತಿಳಿ'' ಎಂದರು. ಅವರ ಅಭಯವಾಣಿಯನ್ನು ಕೇಳಿದ ಯುವಕನು ಧೈರ್ಯೋತ್ಸಾಹಗಳನ್ನು ಪಡೆದ. ಈ ಯುವಕನು ಮಹಾರಾಜರ ನಿರ್ಯಾಣಾನಂತರ ಮಠವನ್ನು ಸೇರಿದ.

ಸ್ವಾಮಿ ಅಖಿಲಾನಂದರು ಕೆಲದಿನಗಳಿಗೋಸ್ಕರ ಅಮೇರಿಕಾದಿಂದ ಭಾರತಕ್ಕೆ ಬಂದಿದ್ದರು. ೧೯೫೦ರ ಡಿಸೆಂಬರ್ ೧೨ ರಂದು ಬೇಲೂರು ಮಠವನ್ನು ತಲುಪಿದ್ದರು. ಇವರು ವಿರಜಾನಂದರನ್ನು ಭೇಟಿಯಾದಾಗ ಮಹಾರಾಜರು ತುಂಬ ಸಂತುಷ್ಟರಾಗಿ ಅವರೊಂದಿಗೆ ಸ್ವಲ್ಪ ಹೊತ್ತು ಮಾತನಾಡಿದರು. ಈ ಬಾರಿ ಅವರು ಅಮೇರಿಕಾಗೆ ಹಿಂತಿರುಗುವ ಸಲುವಾಗಿ ರಾತ್ರಿ ಮುಂಬೈಗೆ ತೆರಳಿ ದರು (೩೦-೧-೫೧). ನ್ಯೂಯಾರ್ಕಿನ ವೇದಾಂತ ಕೇಂದ್ರದ ನಿರ್ವಹಣೆಯನ್ನು ವಹಿಸಿಕೊಂಡಿದ್ದ ಸ್ವಾಮಿ ಪವಿತ್ರಾನಂದರೂ ಮತ್ತು ಅಖಿಲಾನಂದರಿಗೆ ಸಹಕಾರಿಯಾಗಿ ಸ್ವಾಮಿ ಅಜಯಾ ನಂದರೂ ಅವರೊಂದಿಗೆ ಹೊರಟರು. ಇವರೆಲ್ಲರೂ ಮಹಾ ರಾಜರಿಂದ ಬೀಳ್ಗೊಳ್ಳಲು ಬಂದಾಗ ಅವರು ಸ್ಮಿತವದನದಿಂದ ತಮ್ಮ ಶುಭಾಶಯಗಳನ್ನು ಕೋರಿದರು.

ಫೆಬ್ರವರಿಯಲ್ಲಿ ಮಹಾರಾಜರ ಆರೋಗ್ಯ ಮತ್ತಷ್ಟು ಸುಧಾರಿಸಿ, ಎದ್ದು ನಿಲ್ಲುವಂತಾದರು. ಇದಾದ ನಂತರ ಅವರನ್ನು ಪೆರಾಂಬುಲೇಟರಿನಲ್ಲಿ ಕೆಳಕ್ಕಿಳಿಸಿ ಮಠದ ಒಳ ಅಂಗಳದಲ್ಲಿ ಸ್ವಲ್ಪ ಸುತ್ತಾಡಿಸಲಾಯಿತು. ಇದರಿಂದ ಮಹಾರಾಜರಿಗೆ ಆನಂದವಾಯಿತು. ಇದಾದ ನಂತರ ಅವರನ್ನು ಆಗಾಗ ಮೈದಾನದಲ್ಲಿ ರಸ್ತೆಯಲ್ಲಿ ತಿರುಗಾಡಿಸಿಕೊಂಡು ಬರಲಾಗುತ್ತಿತ್ತು. ಹಿಂದಿರುಗುವಾಗ ಶ್ರೀರಾಮಕೃಷ್ಣ ಮಂದಿರದ ಪೂರ್ವಕ್ಕಿರುವ ಮೈದಾನದಲ್ಲಿ ಬ್ರಹ್ಮಾನಂದರ ಸಮಾಧಿ ಮಂದಿರದ ಎದುರಿನ ಒಂದು ಅಶೋಕ ವೃಕ್ಷದ ಕೆಳಗೆ ಪೆರಾಂಬುಲೇಟರನ್ನು ಸ್ವಲ್ಪ ಹೊತ್ತು ನಿಲ್ಲಿಸಲಾಗುತ್ತಿತ್ತು. ಮಹಾರಾಜರು ಕುಳಿತಿರುವಂತೆಯೇ ಭಕ್ತರು ಇಕ್ಕೆಲಗಳಲ್ಲಿ ನಿಂತು ಅವರನ್ನು ನೋಡಬಹುದಿತ್ತು. ಕೆಲವೊಂದು ದಿನ ಅವರನ್ನು ಠಾಕೂರರ ಮಂದಿರಕ್ಕೂ ಕರೆದುಕೊಂಡು ಹೋಗುತ್ತಿದ್ದರು. ಪೆರಾಂಬುಲೇಟರಿನಲ್ಲಿ ಕುಳಿತೇ ದೇವರ ದರ್ಶನ ಮಾಡುತ್ತಿದ್ದರು. ಪೂಜಾರಿಗಳಾಗಿದ್ದ ಹಿತಾನಂದರು (ಹಿರಣ್ಮಯ್) ಅರ್ಘ್ಯವನ್ನು ಸಜ್ಜುಗೊಳಿಸಿ ಮಹಾರಾಜರ ಕೈಗಿಟ್ಟಾಗ, ಅವರು ಅದನ್ನು ಮನಸಾ ನಿವೇದಿಸಿ ಮತ್ತೆ ಪೂಜಾರಿಗಳ ಕೈಗಿಡುತ್ತಿದ್ದರು; ಅವರು ಅದನ್ನು ಶ್ರೀರಾಮಕೃಷ್ಣರ ಪಾದಕ್ಕರ್ಪಿಸುತ್ತಿದ್ದರು. ಸಾಧುಗಳು ಮತ್ತು ಭಕ್ತರು ಮಠಾಧ್ಯಕ್ಷರ ಸನ್ನಿಧಿಯಲ್ಲಿ ಠಾಕೂರರ ದರ್ಶನ ಪಡೆದು ನಮಸ್ಕರಿಸಲು ಕಾದಿರುತ್ತಿದ್ದರು. ಅಲ್ಲಿ ಒಂದು ಗಂಭೀರ ಆಧ್ಯಾತ್ಮಿಕ ಪರಿಸರವನ್ನು ಎಲ್ಲರೂ ಅನುಭವಿಸುತ್ತಿದ್ದರು.

ಮಾರ್ಚ್ ೯ರಂದು ಶ್ರೀರಾಮಕೃಷ್ಣರ ಜನ್ಮತಿಥಿ. ವಿರಜಾನಂದರು ಕೆಳಗಿಳಿದು ಬಂದು ಸುಮಾರು ಒಂದೂವರೆ ಗಂಟೆಗಳ ಕಾಲವಿದ್ದು, ಎಲ್ಲ ಮಂದಿರಗಳ ದರ್ಶನ, ಅರ್ಘ್ಯ ನಿವೇದನೆ ಮತ್ತು ಪ್ರದಕ್ಷಿಣೆಗಳನ್ನು ಗಾಡಿಯಲ್ಲಿ ಕುಳಿತು, ಮುಗಿಸಿದರು. ಭಕ್ತರೂ ಸಹ ಮಹಾರಾಜರ ದರ್ಶನವನ್ನು ಹೃದಯ ತುಂಬುವವರೆಗೂ ಪಡೆದರು. ಸಂಧ್ಯಾರತಿಯನ್ನು ನೋಡುವ ತಮ್ಮ ಇಚ್ಛೆಯನ್ನು ಪ್ರಕಟಿಸಿದ್ದರಿಂದ ಅವರನ್ನು ಮತ್ತೆ ಕೆಳಗಿಳಿಸಿಕೊಂಡು ಬರಲಾಯಿತು. ಮಂದಿರದ ಪೂರ್ವಕ್ಕಿರುವ ವರಾಂಡವನ್ನು ಖಾಲಿಗೊಳಿಸಿ, ಬಾಗಿಲ ಸಮ್ಮುಖದಲ್ಲಿ ಪೆರಾಂಬುಲೇಟರಿನಲ್ಲಿ ಕುಳ್ಳಿರಿಸಲಾಯಿತು. ಆರತಿಯ ನಂತರ ಮಹಾರಾಜರು ಗರ್ಭಮಂದಿರಕ್ಕೆ ಹೋಗಿ ಚಾಮರದಿಂದ ಠಾಕೂರರಿಗೆ ಸ್ವಲ್ಪ ಹೊತ್ತು ವ್ಯಜನ ಸೇವೆ (ಗಾಳಿ ಬೀಸುವುದು) ಮಾಡಿದರು. ಎರಡು ದಿನಗಳ ನಂತರ, ಮಾರ್ಚ್ ೧೧ ರಂದು ಭಾನುವಾರ ರಾಮಕೃಷ್ಣರ ಸಾರ್ವಜನಿಕ ಉತ್ಸವ. ಈ ದಿನವೂ ಸಹ ವಿರಜಾನಂದರು ಕೆಳಗಿಳಿದು ಗ್ರ್ಯಾಂಡ್ ಟ್ರಂಕ್ ರಸ್ತೆವರೆಗೂ ಹೋಗಿ, ಅಂಗಡಿಗಳನ್ನು ನೋಡಿಕೊಂಡು ಬಂದರು. ಸೇವಕರಿಗೆ ಹೇಳಿ ಸಂತೆಯಿಂದ ಚಂದ್ರಪುರಿ ಮತ್ತು ಸಂದೇಶದ ಅಚ್ಚುಗಳನ್ನು ಖರೀದಿಸಿದರು; ಚಿಕ್ಕ ಗುಂಪೊಂದು ಕೀರ್ತನೆಗಳನ್ನು ಹಾಡುತ್ತಿತ್ತು, ಆಶೀರ್ವಾದ ಸ್ವರೂಪವಾಗಿ ಅವರಿಗೊಂದು ರೂಪಾಯಿಯನ್ನು ಕೊಡಿಸಿದರು.

ಮಹಾರಾಜರು ಖಂಡಿತವಾಗಿಯೂ ಸಂಪೂರ್ಣ ಆರೋಗ್ಯ ಹೊಂದುತ್ತಾರೆಂದು ಎಲ್ಲರಿಗೂ ದೃಢ ನಂಬಿಕೆಯಾಗತೊಡಗಿತು. ಆಗಾಗ ಅವರಿಗಾಗಿ ಗ್ರಾಮಾಫೋನಿನ ರೆಕಾರ್ಡ್‌ನ್ನು ಹಾಕಲಾಗುತ್ತಿತ್ತು. ಒಂದು ರೇಡಿಯೋವನ್ನೂ ಸಹ ಅವರ ಕೋಣೆಯಲ್ಲಿ ಅಳವಡಿಸಲಾಗಿತ್ತು. ಯಾವಾಗಲಾದರೊಮ್ಮೆ ಆಕಾಶವಾಣಿಯಲ್ಲಿ ಬರುವ ವಾದ್ಯಸಂಗೀತವನ್ನೋ, ಭಜನೆಯನ್ನೋ ಆಲಿಸುತ್ತಿದ್ದರು. ಮಹಾರಾಜರಿಂದ ದೀಕ್ಷೆ ಪಡೆದ ಕೆಲವರಲ್ಲಿ ರೇಡಿಯೋ ಕಲಾವಿದೆಯರೂ ಇದ್ದರು. ಅವರುಗಳ ಕಾರ್ಯ

ಕ್ರಮವಿದ್ದಾಗ ಮೊದಲೇ ಮಹಾರಾಜರಿಗೆ ಹಾಡುಗಳ ಸಾಹಿತ್ಯವನ್ನು ಬರೆದು ಕಳುಹಿಸುತ್ತಿದ್ದರು. ಏಕೆಂದರೆ ಹಾಡು ಪ್ರಾರಂಭವಾಗುತ್ತಿದ್ದಂತೆಯೇ ಅದರ ಸಾಹಿತ್ಯದ ಮೇಲೆ ಕಣ್ಣಾಡಿಸಲು ಮಹಾರಾಜರು ಬಯಸುತ್ತಿದ್ದರು. ತುಂಬ ಆಸಕ್ತಿಯಿಂದ ಹಾಡುಗಳನ್ನು ಕೇಳುತ್ತಿದ್ದರು. ಮಹಾರಾಜರಿಗೆ ಈಗೀಗ ಕೆಲವು ಹೆಜ್ಜೆ ನಡೆಯಲು ಸಾಧ್ಯವಾಗುತ್ತಿದೆ. ಕೆಲವು ದಿನಗಳ ಹಿಂದೆ, ಮಠದ ಹೊರಗೆ ಕಲಾ ವಿದ್ಯಾಲಯದ ದಕ್ಷಿಣ ಪಾರ್ಶ್ವದ ಮಾರವಾಡಿ ತೋಟವನ್ನೂ ಕೊಂಡುಕೊಳ್ಳಲಾಗಿತ್ತು. ಡಾ. ಹರಿಪದರ ಹೇಳಿಕೆಯ ಮೇರೆಗೆ ಮಹಾರಾಜರನ್ನು ಅಲ್ಲಿ ತಿರುಗಾಡಿಸಿಕೊಂಡು ಬರಲು ಕರೆದುಕೊಂಡು ಹೋಗಲಾಯಿತು. (೨೧ ಮಾರ್ಚ್) ತೋಟದ ಮನೆಯನ್ನೂ, ಕೃಷಿಯ ಭೂಮಿಯನ್ನೂ ನೋಡಿದರು. ನಾಲ್ಕು ಮೊಳ ಉದ್ದದ ಹಿಡಿಕೆಯಿಂದ ಗುದ್ದಲಿಯೊಂದನ್ನು ಮೊದಲೇ ಅಣಿಗೊಳಿಸಲಾಗಿತ್ತು. ಅದನ್ನು ಅವರ ಕೈಗಿತ್ತಾಗ ಮಹಾರಾಜರು ಅದರಿಂದ ಮಣ್ಣನ್ನು ಅಗೆದು, ಔಷಧಿ ಸಸಿವೊಂದನ್ನು ನೆಟ್ಟರು. ಮಾರ್ಚ್ ೨೩ರಂದು ಹೋಳಿ ಹುಣ್ಣಿಮೆ. ಅಂದು ತಮ್ಮ ಕಿಟಿಕಿಯ ಮೂಲಕ ಕೆಳಗಿನ ಅಂಗಳದಲ್ಲಿ ನಡೆಯುತ್ತಿದ್ದ ಹೋಳಿಯ ಆಟವನ್ನು ನೋಡಿದರು. ಕೀರ್ತನೆಯನ್ನು ಕೇಳಿ ಆನಂದಿಸಿದರು.

ಮಠಾಧ್ಯಕ್ಷರ ಶಾರೀರಿಕ ಅಸ್ವಸ್ಥೆಯಿಂದಾಗಿ ಈ ಬಾರಿಯ ಶ್ರೀರಾಮಕೃಷ್ಣರ ಜನ್ಮದಿನದಂದು ಸಂನ್ಯಾಸ ಮತ್ತು ಬ್ರಹ್ಮಚರ್ಯ ಅನುಷ್ಠಾನಗಳು ನಡೆದಿರಲಿಲ್ಲ. ಈಚೆಗೆ ಅವರ ಆರೋಗ್ಯ ಸುಧಾರಿಸಿದ್ದರಿಂದ ಎರಡು ತಿಂಗಳ ನಂತರ ವೈಶಾಖದ ಪೂರ್ಣಿಮೆಯಂದು ಆ ಅನುಷ್ಠಾನಗಳು ನಡೆಯುವ ಸಾಧ್ಯತೆಗಳು ಕಂಡು ಬಂದವು. ಈ ಪ್ರಸ್ತಾಪ ಮಹಾರಾಜರಿಗೆ ತುಂಬ ಸಂತೋಷವಾಯಿತು. ಸಂನ್ಯಾಸ ಮತ್ತು ಬ್ರಹ್ಮಚರ್ಯ ಅಭ್ಯರ್ಥಿಗಳು ಉತ್ಕಟ ಆಕಾಂಕ್ಷೆಯಿಂದ ಪ್ರತೀಕ್ಷೆ ಮಾಡತೊಡಗಿದರು. ಮಠದ ಕ್ಷೌರಿಕನಾದ ಮೂರತ್ ರಾಮ್ ಸಹ ಮಹಾರಾಜರ ಶಿಷ್ಯ, ಬಹಳ ಭಕ್ತಿವಂತ. ಅವನು ರಜೆ ಪಡೆದು ಮನೆಗೆ ಹೋಗುವವನಿದ್ದ. ಪ್ರಣಾಮ ಮಾಡಲು ಬಂದಾಗ ಮಹಾರಾಜರು ''ನೋಡು ವೈಶಾಖೀ ಪೂರ್ಣಿಮೆಯಂದು ಏನಾದರೂ ಸಂನ್ಯಾಸ ನಡೆದರೆ ಹೇಳಿ ಕಳುಹಿಸುವೆ, ಬಂದುಬಿಡು. ಬ್ರಹ್ಮಚಾರಿಗಳಿಗೆ ಮುಂಡನ ಮಾಡಬೇಕು'' ಎಂದರು.

ಮೂರತ್‌ನ ಕೈಗೆ ೫ ರೂಪಾಯಿಗಳನ್ನೂ ಹೆಂಡತಿಗೆ ಒಂದು ಸೀರೆಯನ್ನೂ ಸಹ ಕೊಟ್ಟರು. ದೂರದ ಗೋರಖಪುರದ ಈ ಕ್ಷೌರಿಕನು ವಿರಜಾನಂದರ ಪ್ರೀತಿಗೆ ಪಾತ್ರನಾಗಿದ್ದ. ವಿದ್ವಾಂಸರೂ, ಧನಿಕರೂ, ಮಾನ್ಯರೂ, ಸದ್ಗುಣಿಗಳೂ ಆದವರಿಗೆ ಮಹಾರಾಜರ ಹೃದಯದಲ್ಲಿ ಯಾವ ಸ್ಥಾನವಿದೆಯೋ ನನಗೂ ಅದೇ ಸ್ಥಾನವಿದೆ ಎಂಬ ಭಾವನೆಯು ಆ ಯುವಕನಿಗೆ ಸದಾ ತೃಪ್ತಿಯನ್ನೂ, ಆನಂದವನ್ನೂ ನೀಡುತ್ತಿತ್ತು. ಇಂದಿಗೂ ಸಹ 'ಬಾಬಾ' (ತಂದೆ)ರವರ ಮಾತೆತ್ತಿದರೆ ಆತನ ಕಣ್ಣುಗಳು ಒದ್ದೆಯಾಗುತ್ತಿದ್ದವು.

ಅಂತೆಯೇ ಮಠದ ಕಸಗುಡಿಸುವವನಾದ ವೃದ್ಧ ರಾಮಪ್ರಸಾದನ ನೆನಪೂ ಆಗುತ್ತದೆ. ಆತನ ಆತ್ಮೀಯರಿರುವುದು ದೂರದ ಊರಿನಲ್ಲಿ. ಅವನಾದರೋ ಗಂಗಾತೀರದ ಈ ಮಠದ ಸಾಧುಗಳ ಸ್ನೇಹ ಛಾಯೆಯಲ್ಲಿ ಯಾವಾಗಲೂ ಇರುತ್ತಿದ್ದ. ಅವನ ಭಕ್ತಿ ವಿಶ್ವಾಸವಾದರೋ ಅದ್ಭುತವಾದದ್ದು! ವಿರಜಾನಂದರು ಮೈದಾನಕ್ಕೆ ತಿರುಗಾಡಲು ಬಂದಾಗಲೆಲ್ಲ ಓಡಿ ಬಂದು ನಮಸ್ಕರಿಸುತ್ತಿದ್ದ. ಮಹಾರಾಜರೂ ಸಹ ಅವನೊಂದಿಗೆ ಒಂದೆರಡು ಮಾತುಗಳನ್ನಾಡುತ್ತಿದ್ದರು. ಠಾಕೂರರ ನಾಮಸ್ಮರಣೆ ಮಾಡುತ್ತಲೇ ಮಠದಲ್ಲಿ ಅವನ ದೇಹಾಂತವಾಯಿತು. ಸಾಧುಗಳು ಅವನ ಮೃತಶರೀರವನ್ನು ತಮ್ಮ ಹೆಗಲಲ್ಲಿ ಹೊತ್ತು ಸ್ಮಶಾನಕ್ಕೆ ಒಯ್ದಿದ್ದರು.

ಸ್ವಾಮಿ ನಿಶ್ರೇಯಸಾನಂದರು ಮೂರು ವರ್ಷಗಳು ಮಾರಿಷಸ್ ದ್ವೀಪದಲ್ಲಿ ಸೇವೆ ಸಲ್ಲಿಸಿ ಕೆಲವು ದಿನಗಳಿಗೋಸ್ಕರ ಜನವರಿಯಲ್ಲಿ (೧೯೫೧) ಭಾರತಕ್ಕೆ ಬಂದಿದ್ದರು. ಜೊತೆಯಲ್ಲಿ ಮಾರಿಷಸ್ ಕೇಂದ್ರದ ಪೋಷಕ ಭಕ್ತರೊಬ್ಬರೂ ಸಹ ಬಂದಿದ್ದಾರೆ. ಮಠಾಧ್ಯಕ್ಷರಾದ ವಿರಜಾನಂದರಿಂದ ದೀಕ್ಷೆ ತೆಗೆದುಕೊಳ್ಳುವುದೇ ಅವರ ಉದ್ದೇಶ. ಅಷ್ಟು ದೂರದಿಂದ ಬಂದವರ ಅಭೀಷ್ಟವನ್ನು ಪೂರ್ಣಗೊಳಿಸುವೆನೆಂದು ಹಠ ಹಿಡಿದು ಕುಳಿತರು ವಿರಜಾನಂದರು. ಆದರೆ ದೀಕ್ಷಾದಾನದ ಶಾರೀರಿಕ ಮತ್ತು ಮಾನಸಿಕ ಶ್ರಮವನ್ನು ಅವರ ಈಗಿನ ಸ್ವಾಸ್ಥ್ಯವು ತಡೆದುಕೊಳ್ಳುವಂತಿಲ್ಲವೆಂದು ವೈದ್ಯರು ಅದಕ್ಕೆ ಅನುಮತಿ ನೀಡಲಿಲ್ಲ ; ಇನ್ನೂ ಸ್ವಲ್ಪ ದಿನ ಭಕ್ತರು ಕಾದಿರಲಿ ಎಂದುಬಿಟ್ಟರು. ಆದರದು ಭಕ್ತರಿಗೆ ಸಾಧ್ಯವಿರಲಿಲ್ಲ. ಅವರು ಮಹಾರಾಜರ ಆಶೀರ್ವಾದಗಳನ್ನು ಪಡೆದು ತೆರಳಿದರು.

ಮುಂಬೈ ಆಶ್ರಮದ ಎರಡಂತಸ್ತಿನ ಬೃಹತ್ ಕಟ್ಟಡವೊಂದನ್ನು ಮಾರ್ಚ್ ೪ರಂದು ಭಾರತದ ಪ್ರಧಾನಮಂತ್ರಿಗಳಾದ ಜವಹರ್‌ಲಾಲ್ ನೆಹರೂ ಉದ್ಘಾಟಿಸಿದರು. ಆ ಕಟ್ಟಡದಲ್ಲಿ ವಿದ್ಯಾರ್ಥಿ ನಿಲಯ, ಗ್ರಂಥಾಲಯ, ಪ್ರವಚನ ಗೃಹ ಮತ್ತು ಉಚಿತ ಚಿಕಿತ್ಸಾಲಯಗಳು ಇದ್ದವು. ಈ ಸಮಾರಂಭಕ್ಕೆ ಸ್ವಾಮಿ ಮಾಧವಾನಂದರೂ ಮಠದ ಹಿರಿಯ ಸಂನ್ಯಾಸಿಗಳೂ ಹೋಗಿದ್ದರು. ಮಾರ್ಚ್ ೧೦ರಂದು ಸ್ವಾಮಿ ಮಾಧವಾನಂದರು ಆ ಆಶ್ರಮದಲ್ಲಿ ಸ್ವಾಮೀಜಿಯವರ ಕಲ್ಲಿನ ಪ್ರತಿಮೆಯನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿದ್ದು ಅದನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಬಿ.ಜಿ. ಖೇರ್ ನಡೆಸಿಕೊಟ್ಟರು.

ಎರಡು ವರ್ಷಗಳ ವಿಶ್ರಾಂತಿಯನ್ನು ಪಡೆದ ನಂತರ ೧೯೫೧ರ ಏಪ್ರಿಲ್ ೧ರಂದು ಮಾಧವಾನಂದರು ಮತ್ತೆ ಮಠ ಮತ್ತು ಮಿಷನ್ನಿನ ಕಾರ್ಯದರ್ಶಿಗಳಾಗಿ ಜವಾಬ್ದಾರಿಯನ್ನು ವಹಿಸಿಕೊಂಡರು. *(ಮುಂದುವರಿಯುವುದು)*